"ಈ ಜೀವನ ಅನ್ನೋದು ಕೇವಲ ಮೂರು ದಿನಗಳ ಆಟ ಸರ್! ಇದ್ದಷ್ಟು ದಿನ ಸುಖಪಡಬೇಕು."

"ನೂರು ಶಿಲ್ಲಿಂಗ್ ಕೊಟ್ಟರೆ ನಿನ್ನ ಜೀವನ ಸುಖಮಯವಾಗುವುದರಲ್ಲಿ ಯಾವುದೇ ಸಂದೇಹಗಳಿಲ್ಲ ಹನ್ನಾ! ಅದಕ್ಕೆಂದೇ ನಾನು ನನ್ನ ಅಡುಗೆಯವಳಿಗೆ ಇಷ್ಟೊಂದು ಭಾರಿ ಸಂಬಳವನ್ನು ಕೊಡಲು ತಯಾರಾಗುತ್ತಿರುವುದು. ಆದರೆ ಒಂದು ಮಾತು ನೆನಪಿಡು ಹನ್ನಾ. ಬಂಗಾರದ ತತ್ತಿ ಕೊಡುತ್ತಿರುವ ಕೋಳಿಯನ್ನು ಕುಯ್ಯಲು ಪ್ರಯತ್ನಿಸಬೇಡ."

"ಅಂತ ಯಾವ ದುರಾಲೋಚನೆಗಳೂ ನನಗಿಲ್ಲ ಸರ್. ಬೇರೆಯವರ ಧ್ಯೇಯಗಳು ಬೇರೆ ಇರಬಹುದು. 'ಬದುಕು, ಬದುಕಲು ಬಿಡು.' ಇದು ನನ್ನ ಸಿದ್ಧಾಂತ. ಆದರೂ ನಾನು ಬಹಳ ಎಚ್ಚರದಿಂದ್ದೇನೆ. ನನಗೆ ಈಗ ಈ ಡಾಕ್ಟರುಗಳ ಮೇಲೆ ಕಿಂಚಿತ್ತೂ ಭರವಸೆ ಉಳಿದಿಲ್ಲ. ಏನೇ ಆಗಲಿ ಎಂದು, ನನ್ನ ಜೀವಕ್ಕೆ ಏನಾದರೂ ಅಪಾಯ ಎರಗಿದರೆ ಇರಲಿ ಎಂದು ಒಂದು ಪತ್ರವನ್ನು ಬರೆದು ನನ್ನ ತಂಗಿಯ ಕೈಯಲ್ಲಿ ಕೊಟ್ಟು, ನಾನು ಅಕಸ್ಮಾತ್ ಸತ್ತರೆ ಈ ಪತ್ರವನ್ನು ಸಂಬಂಧಿಸಿದವರಿಗೆ ತಲುಪಿಸು ಎಂದು ಹೇಳಿದ್ದೇನೆ..."

ಸ್ಪೆನ್ಸರ್ ಮೇಜಿನ ಮೇಲಿನ ಹೂದಾನಿಯಲ್ಲಿದ್ದ ಹೂಗಳನ್ನು ಸರಿಪಡಿಸುವವನಂತೆ ಅತ್ತ ತಿರುಗಿದ. ಅಲ್ಲಿಂದ ತೆರೆದ ಕಿಟಕಿ ಎಡೆಗೆ ನಡೆದು ಹೊರಗೆ ಹೂತೋಟವನ್ನು ನೋಡತೊಡಗಿದ. ಅವನ ಕೈಗಳು ಮೆಲ್ಲಗೆ ಕಂಪಿಸುತ್ತಿದ್ದವು.

"ಒಂದು ವೇಳೆ ನಿನ್ನ ತಂಗಿ ಕುತೂಹಲ ತಡೆಯಲಾರದೆ ಪತ್ರವನ್ನು ಮೊದಲೇ ಒಡೆದು ಓದಿದರೆ?!" ಅವನು ಕೇಳಿದ.

"ಹಾಗೇನಾದರೂ ಆದರೆ ಏನೂ ಮಾಡುವಂತಿಲ್ಲ. ಆದರೆ ಹಾಗೆ ಆಗಲಾರದೆಂದು ನನ್ನ ನಂಬಿಕೆ."

"ಹನ್ನಾ, ನೀನು ಗಟ್ಟಿಮುಟ್ಟಾಗಿದ್ದೀಯ. ನಿನ್ನ ಜೀವಕ್ಕೆ ಇನ್ನೂ ಐವತ್ತು ವರ್ಷ ಏನೂ ಆಗದಿರಲೆಂದು ನಾನು ಹಾರೈಸುತ್ತೇನೆ." ಎಂದ ಸ್ಪೆನ್ಸರ್.

"ಏನೇ ಆಗಲಿ. ನನ್ನ ಜಾಗ್ರತೆಯಲ್ಲಿ ನಾನಿರುವುದು ಬುದ್ಧಿವಂತಿಕೆ."

"ನೀನು ಹೇಳುವುದೂ ಸರಿಯೇ... ನಿನ್ನ ಸಂಬಳವನ್ನು ಹೆಚ್ಚಿಸಿರುವ ವಿಷಯ ಬೇರ್ಯಾರಿಗೂ ತಿಳಿಸಬೇಡ ಹನ್ನಾ, ನಿನ್ನಲ್ಲಿಯೇ ಇರಲಿ. ನೆರೆಹೊರೆಯವರಿಗೆ ಗೊತ್ತಾದರೆ ನನ್ನ ಮೇಲೆ ಸಿಟ್ಟಾಗುತ್ತಾರೆ. ನೀನು ಹೆಚ್ಚಿನ ಸಂಬಳಕ್ಕೆ ಅರ್ಹಳಾಗಿದ್ದೀಯಾ ಎನ್ನುವ ಒಂದೇ ಕಾರಣಕ್ಕೆ ನಿನಗೆ ಭಡ್ತಿ ಕೊಡುತ್ತಿದ್ದೇನೆ. ಸದ್ಯಕ್ಕೆ ನೂರು ಶಿಲ್ಲಿಂಗಷ್ಟೇ ಸಾಕು."

ಹನ್ನಾ ಹೊರಟು ಹೋದ ನಂತರ ಅವನಿಗೆ ತಾನು ಅವಳ ಜಾಲದಲ್ಲಿ ಸಿಕ್ಕಿಬಿದ್ದಿದ್ದು, ಹೇಗೆ ಬಿಡಿಸಿಕೊಳ್ಳುವುದೆಂದು ಯೋಚಿಸಲಾರಂಭಿಸಿದ. ಅವನ ಸ್ಥಿತಿ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಗಿತ್ತು. ಒಬ್ಬ ಸ್ತ್ರೀಯ ಕಪಿಮುಷ್ಟಿಯಿಂದ ಬಿಡಿಸಿಕೊಂಡೆ ಎಂಬಷ್ಟರಲ್ಲೇ ಮತ್ತೊಬ್ಬಳು ವಕ್ಕರಿಸಿಕೊಂಡಿದ್ದಳು. ಅಡುಗೆಯವಳ ಸಂಶಯಗಳಿಗೆ ಯಾವುದೇ ಪುರಾವೆಗಳಿಲ್ಲವೆಂದುಕೊಂಡರೂ ಹುಡುಕಲು ಹೊರಡುವವರಿಗೆ ಸಿಗುವುದೇನೂ ದುಸ್ತರವಾಗಿರಲಿಲ್ಲ. ಅವ್ಯಕ್ತ ಭೀತಿ ಮತ್ತು ಕೋಪದಿಂದ ಅವನು ಕಂಗಾಲಾದ. ಒಬ್ಬ ಯಃಕಶ್ಚಿತ್ ಅಡುಗೆ ಹೆಂಗಸಿನ ಕೈಯಲ್ಲಿ ತಾನೊಂದು ಆಟದ ವಸ್ತುವಾಗುತ್ತಿರುವುದು ಅವನ ಕೋಪವನ್ನು ಇಮ್ಮಡಿಗೊಳಿಸಿತು. ಅವಳಿಗೆ ಕುಡಿಯುವ ಚಟ ಇದ್ದು, ಸಂಬಳ ಬೇರೆ ಏರಿಕೆಯಾಗಿ ಕುಡಿದದ್ದು ಹೆಚ್ಚಾಗಿ ಅಮಲಿನಲ್ಲಿ ಏನೆಲ್ಲಾ ಬಡಬಡಿಸಿದರೆ? ತಾನು ಅವಳ ಕೈಯಲ್ಲಿದ್ದೇನೆ ಎಂಬುದನ್ನು ತೋರಿಸಲು ಅವಳು ಒಂದಲ್ಲಾ ಒಂದು ದಿನ ಏನಾದರೂ ಮಾಡಿಯೇ ತೀರುತ್ತಾಳೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿರಲಿಲ್ಲ.

ಅವನು ಯೋಚಿಸಲಾರಂಭಿಸಿದ. ಯಾವುದಾದರೂ ದಾರಿ ಸಿಕ್ಕಿಯೇ ಸಿಗುತ್ತದೆ. ಆದಷ್ಟು ಬೇಗ,